## ಓಎಸ್ ಸಂಖ್ಯೆಃ 91/2023 ಪಿಡಬ್ಲ್ಯೂ:1

## ದಿನಾಂಕಃ 02-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದ**

1. ನನ್ನ ಮತ್ತು ಹನುಮಂತಪ್ಪನ ಮಧ್ಯ ಯಾವ ವರ್ಷದಲ್ಲಿ ಮದುವೆಯಾಗಿದೆ ಎಂದು ನೆನಪಿಲ್ಲ. ಅಂದಾಜು 50 ವರ್ಷದ ಹಿಂದೆ ನಮ್ಮ ಮದುವೆಯಾಗಿದೆ. ನಾನು ಹನುಮಂತಪ್ಪನ ಜೊತೆ ವೈವಾಹಿಕ ಜೀವನ ನಡೆಸಲು ಹೋಗಿಲ್ಲ ಎಂದರೆ ಸರಿ ಅಲ್ಲ. ನಾನು ಹನುಮಂತಪ್ಪನ ಜೊತೆ ಜೀವನ ನಡೆಸಲು ಹೋಗದ ಕಾರಣ ನನ್ನ ತವರು ಮನೆ ಕಡೆಯವರು ಮತ್ತು ಹನುಮಂತಪ್ಪನ ಕಡೆಯ ಹಿರಿಯರು ಸೇರಿ ಹಲವು ಬಾರಿ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ನದಿಹರಳಹಳ್ಳಿ ಗ್ರಾಮದಲ್ಲಿ ಹಾಗೂ ಉಕ್ಕಡಗಾತ್ರಿ ಗ್ರಾಮದಲ್ಲಿ ಸಹ ಹಲವು ಬಾರಿ ಪಂಚಾಯಿತಿ ಆಗಿದೆ ಎಂದರೆ ಸರಿ ಅಲ್ಲ. ಆದರೂ ಸಹ ನಾನು ಜೀವನ ಮಾಡಲು ಹೋಗಿಲ್ಲ ಎಂದರೆ ಸರಿ ಅಲ್ಲ ಅಲ್ಲಿ ಹೋದಾಗ ಆತ ನನಗೆ ಹೊಡಬಡೆ ಮಾಡುತ್ತಿದ್ದ ಎಂದು ಹೇಳುತ್ತಾರೆ. ನನ್ನನ್ನು ಅಲ್ಲಿ ಇಟ್ಟುಕೊಂಡಿರಲಿಲ್ಲ ಮರಳಿ ಕಳಿಸಿರುತ್ತಾರೆ ಎಂದು ಹೇಳುತ್ತಾರೆ. ನಾನು ವೈವಾಹಿಕ ಜೀವನ ಮಾಡಲು ಹೋಗಿದ್ದೆ ಅಲ್ಲಿ ಹನುಮಂತಪ್ಪ ನನಗೆ ಹೊಡೆಬಡೆ ಮಾಡಿ ಮನೆಯಿಂದ ಹೊರಗೆ ಹಾಕಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

2. ಸದ್ರಿ ಹನುಮಂತಪ್ಪನ ಸ್ವಂತ ತಮ್ಮನಿಗೆ ನನ್ನ ಖಾಸ ಸಹೋದರಿಯನ್ನು ಕೊಟ್ಟು ಮದುವೆ ಮಾಡಲಾಗಿದೆ. ಅಣ್ಣ ತಮ್ಮನಿಗೆ ಅಕ್ಕ ತಂಗಿಯನ್ನು ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ನಿಜ. ನನ್ನ ತಂಗಿ ಈಗಲೂ ಸಹ ಪರಮೇಶಪ್ಪನ ಜೊತೆ ಜೀವನ ಮಾಡುತ್ತಿದ್ದಾಳೆ ಎಂದರೆ ಅವಳ ಗಂಡ ಚೆನ್ನಾಗಿದ್ದಾನೆ ಮಾಡುತ್ತಾಳೆ ಎಂದು ಹೇಳುತ್ತಾರೆ. ನನ್ನ ಮದುವೆಯಾದ ನಂತರ ಹನುಮಂತಪ್ಪ ಮತ್ತು ಆತನ ತಮ್ಮ ಪರಮೇಶಪ್ಪ ಒಟ್ಟಿಗೆ ಕೂಡಿ ಇದ್ದರು ಎಂದರೆ ನಿಜ. ಮದುವೆಯಾದ ನಂತರ ಹನುಮಂತಪ್ಪ ಮತ್ತು ಆತನ ಸಹೋದರರು ಚೆನ್ನಾಗಿದ್ದರು ಎಂದರೆ ನಿಜ. ಆಗ ನಾವು ಕೂಡ ಚೆನ್ನಾಗಿದ್ದೆವು ಎಂದು ಹೇಳುತ್ತಾರೆ. ನಾನು ಯಾವತ್ತೂ ವೈವಾಹಿಕ ಜೀವನ ಮಾಡಲು ಹನುಮಂತಪ್ಪನ ಗ್ರಾಮಕ್ಕೆ ಹೋಗಿಲ್ಲ ಎಂದರೆ ಸರಿ ಅಲ್ಲ.

3. ಹಲವು ಬಾರಿ ಪಂಚಾಯಿತಿಗಳನ್ನು ಮಾಡಿ ನಾನು ವೈವಾಹಿಕ ಜೀವನಕ್ಕೆ ಹೋಗದೇ ಇರುವ ಕಾರಣಕ್ಕೆ ಪಂಚರು ಸೇರಿ ಕಾನೂನುಬದ್ಧವಾಗಿ ಹನುಮಂತಪ್ಪನಿಗೆ 1 ನೇ ಪ್ರತಿವಾದಿಯನ್ನು ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ ಅಲ್ಲ. ಸದ್ರಿ ನಾನು ಹನುಮಂತಪ್ಪನ ಜೊತೆ ಒಳ್ಳೆ ರೀತಿಯಿಂದ ಜೀವನ ಸಾಗಿಸುತ್ತಿದ್ದಲ್ಲಿ ಆತ ಮತ್ತೊಂದು ಮದುವೆಯಾಗುತ್ತಿರಲಿಲ್ಲ ಎಂದರೆ ಸರಿ ಅಲ್ಲ. ನನ್ನ ಮತ್ತು ಹನುಮಂತಪ್ಪನ ಮಧ್ಯೆ ವೈವಾಹಿಕ ಜೀವನ ನಡೆಯದೇ ಇರುವ ಕಾರಣ ನನಗೆ ಮಕ್ಕಳಾಗಿಲ್ಲ ಎಂದರೆ 11 ತಿಂಗಳು ಮಾತ್ರ ನಾನು ಇದ್ದೆ ಆ ಕಾರಣಕ್ಕಾಗಿ ಮಕ್ಕಳಾಗಿಲ್ಲ ಎಂದು ಹೇಳುತ್ತಾರೆ.

4. ಪ್ರತಿವಾದಿ 1 ಇವರನ್ನು ಮದುವೆಯಾದ ನಂತರ ಅವರಿಗೆ ಪ್ರತಿವಾದಿ ನಂಬ್ರ 2 ರಿಂದ 7 ಒಟ್ಟು 6 ಜನ ಮಕ್ಕಳು ಜನಿಸಿರುತ್ತಾರೆ ಎಂದರೆ ನಿಜ. ಮದುವೆಯಾದ ಒಂದೇ ಕಾರಣಕ್ಕಾಗಿ ನಾನು ಹನುಮಂತಪ್ಪನ ವಿರುದ್ಧ ಜೀವನಾಂಶ ಕೋರಿ ಅರ್ಜಿ ದಾಖಲಿಸುತ್ತ ಬಂದಿದ್ದೇನೆ ಎಂದರೆ ನಿಜ. ನನ್ನನ್ನು ಮನೆಯಿಂದ ಹೊರಗೆ ಹಾಕಿದ ನಂತರ ನಾನು ಜೀವನಾಂಶ ಅರ್ಜಿ ಸಲ್ಲಿಸಿರುತ್ತೇನೆ ಅದನ್ನು ಅಂದಾಜು 50 ವರ್ಷಗಳ ಹಿಂದೆ ಹಾಕಿರಬಹುದು. ಹನುಮಂತಪ್ಪ ಜೀವಂತ ಇರುವವರೆಗೂ ನನಗೆ ಜೀವನಾಂಶ ಕೊಡುತ್ತ ಬಂದಿರುತ್ತಾನೆ ಎಂದರೆ ಸರಿ. ಹನುಮಂತಪ್ಪನನ್ನು ಪ್ರತಿವಾದಿಯರು ಜೋಪಾನ ಮಾಡಿಕೊಂಡು ಬಂದಿರುತ್ತಾರೆ ಎಂದರೆ ನಿಜ.

5. ಸದ್ರಿ ಮೃತ ಹನುಮಂತಪ್ಪ 2011 ರಲ್ಲಿ ಪ್ರತಿವಾದಿಯರ ಹೆಸರನ್ನು ಜಂಟಿಯಾಗಿ ಜಮೀನುಗಳಲ್ಲಿ ದಾಖಲಿಸಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲದೇ ದಾಖಲಿಸಿಕೊಂಡಿರುತ್ತಾನೆ ಎಂದು ಹೇಳುತ್ತಾರೆ. ಸದ್ರಿ ಪ್ರತಿವಾಯ ಹೆಸರಲ್ಲಿ ಸಾಮೂಹಿಕವಾಗಿ ದಾವಾ ಆಸ್ತಿಗಳ ಮೇಲೆ ಹೆಸರು ದಾಖಲಿದೆ ಎಂದರೆ ಇರಬಹುದು ಎಂದು ಹೇಳುತ್ತಾರೆ. ಸದ್ರಿ ಮ್ಯುಟೇಷನ್ ಡೈರಿಗಳನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಮೃತ ಹನುಮಂತಪ್ಪ ನನಗೆ ಗೊತ್ತಿಲ್ಲದಂತೆ ಮಾಡಿರುತ್ತಾನೆ ಎಂದು ಹೇಳುತ್ತಾರೆ. ಸದ್ರಿ ಜಮೀನನ್ನು ಪ್ರತಿವಾದಿಯರೇ ಉಳುಮೆ ಮಾಡುತ್ತ ಬಂದಿರುತ್ತಾರೆ ಎಂದರೆ ನಿಜ. ಪ್ರತಿವಾದಿಯರು ತಮ್ಮ ತಮ್ಮ ಮಧ್ಯ ಹನುಮಂತಪ್ಪನ ಜೀವಿತಾವಧಿಯಲ್ಲಿ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದ್ರಿ ಆಸ್ತಿಯನ್ನು ಹನುಮಂತಪ್ಪ ಆತನೇ ಹಂಚಿಕೊಟ್ಟಿರುತ್ತಾನೆ ಎಂದರೆ ಆತ ನನಗೆ

ಗೊತ್ತಿಲ್ಲದೇ ಹಂಚಿಕೊಟ್ಟಿರುತ್ತಾನೆ ಎಂದು ಹೇಳುತ್ತಾರೆ. ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

6. ಹನುಮಂತಪ್ಪ ಪಾಲು ವಿಭಾಗ ಮಾಡುವ ಸಮಯದಲ್ಲಿ 3 ಲಕ್ಷ ರೂಪಾಯಿ ಹಣವನ್ನು ತನ್ನ ಹಿಸ್ಸೆಗೆ ಪಡೆದುಕೊಂಡು ಮತ್ತು ಬಾಕಿ ಉಳಿದ ಆಸ್ತಿಗಳನ್ನು ತನ್ನ ಮಕ್ಕಳ ಮಧ್ಯ ವಿಭಾಗ ಮಾಡಿಸಿರುತ್ತಾನೆ ಎಂದರೆ ಸರಿ ಅಲ್ಲ. ಆ 3 ಲಕ್ಷ ಹಣವನ್ನು ಹನುಮಂತಪ್ಪ ನನಗೆ ಕೊಟ್ಟಿರುತ್ತಾನೆ ಎಂದರೆ ಸರಿ ಅಲ್ಲ. ನಾನು 3 ಲಕ್ಷ ಹಣವನ್ನು ಪಡೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನಗೆ ಯಾವುದೇ ರೀತಿ ಆಸ್ತಿಯಲ್ಲಿ ಹಿಸ್ಸೆ ಬೇಡ ಎಂದು ಹೇಳಿ ಪಂಚಾಯಿತಿ ಮಾಡಿ 3 ಲಕ್ಷ ಹಣವನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಪ್ರತಿವಾದಿಯರು ಮೃತ ಹನುಮಂತಪ್ಪನ ಜೀವಿತಾವಧಿಯವರೆಗೆ ಆತನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ ಎಂದರೆ 6 ಎಕರೆ ಜಮೀನು ಇದೆ ಅದರಿಂದ ಬಂದ ಉತ್ಪನ್ನದಿಂದ ನೋಡಿರಬಹುದು ಎಂದು ಹೇಳುತ್ತಾರೆ. ಸದ್ರಿ ಶಾಸ್ತ್ರೋಕ್ತವಾಗಿ ಹನುಮಂತಪ್ಪನ ಶವಸಂಸ್ಕಾರ ಮಾಡಿರುತ್ತಾರೆ ಎಂದರೆ ಮಾಡಿರಬಹುದು ಆ ಸಮಯಕ್ಕೆ ನನಗೆ ವಿಷಯ ಹೇಳಿಲ್ಲ ಎಂದು ಹೇಳುತ್ತಾರೆ. ನನಗೆ ಆತನ ಮರಣದ ಬಗ್ಗೆ ಸುದ್ದಿ ತಿಳಿಸಿದರೂ ಸಹ ನಾನು ಹೋಗಿಲ್ಲ ಎಂದರೆ ಸರಿ ಅಲ್ಲ. ಮೃತ ಹನುಮಂತಪ್ಪನ ತಿಥಿ ಮತ್ತು ಇತರ ಕಾರ್ಯಗಳನ್ನು ಆತನ ಮಕ್ಕಳು ಮಾಡಿರುತ್ತಾರೆ ಎಂದರೆ ನನಗೆ ಯಾವುದೇ ವಿಷಯ ತಿಳಿಸದ ಕಾರಣ ಗೊತ್ತಿಲ್ಲ ಎಂದು ಹೇಳುತ್ತಾರೆ.

7. ನನಗೆ ಹನುಮಂತಪ್ಪ ತೀರಿಕೊಂಡ ನಂತರ ವಿಷಯ ತಿಳಿಸಿದರೂ ಸಹ ನಾನು ಯಾವುದೇ ಕಾರ್ಯದಲ್ಲಿ ಭಾಗಿಯಾಗಿಲ್ಲ ಎಂದರೆ ನನಗೆ ವಿಷಯ ತಿಳಿಸಿಲ್ಲ ಎಂದು ಹೇಳುತ್ತಾರೆ. ಸದ್ರಿ ಪಾಲು ವಿಭಾಗ ಪತ್ರದ ಪ್ರಕಾರ ಮೃತ ಹನುಮಂತಪ್ಪನ ಮಕ್ಕಳ ಹೆಸರಿನಲ್ಲಿ ಆತನೇ ಮಾಡಿದ್ದರಿಂದ ನನಗೆ ಆ ಆಸ್ತಿಯಲ್ಲಿ ಯಾವುದೇ ಪಾಲು ವಿಭಾಗ ಇಲ್ಲ ಎಂದರೆ ಸರಿ ಅಲ್ಲ. ವಾಟ್ನಿ ಪ್ರಕಾರ ಪ್ರತಿವಾದಿಯರ ಹೆಸರಿನಲ್ಲಿ ಆಸ್ತಿಗಳು ದಾಖಲಾಗಿವೆ ಎಂದರೆ ಆಗಿರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಹನುಮಂತಪ್ಪ ತನ್ನ ಹಿಸ್ಸೆ ಆಸ್ತಿಯ ಹಣವನ್ನು ನನಗೆ ಕೊಟ್ಟಿದ್ದರಿಂದ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಇಲ್ಲ ಎಂದರೆ ಸರಿ ಅಲ್ಲ. ನಾನು ನನ್ನ ಪಾಲಿನ 3 ಲಕ್ಷ ಹಣವನ್ನು

ಪಡೆದಿದ್ದರೂ ಸಹ ನಾನು ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನನಗೆ ಕೇವಲ ಮೃತ ಹನುಮಂತಪ್ಪನ ಜೀವನಾಂಶದ ಹಕ್ಕು ಮಾತ್ರ ಇದ್ದು ಹೊರತು ಬೇರೆ ಯಾವುದೇ ಹಿಸ್ಸೆ ಇರುವುದಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇದ್ದು ನನಗೆ ಯಾವುದೇ ರೀತಿಯ ಹಿಸ್ಸೆ ಹಕ್ಕು ಇಲ್ಲ ಎಂದರೆ ಸರಿ. ನಾನು ಜೀವನಪರ್ಯಂತ ಅಂತ 3 ಲಕ್ಷ ಹಣವನ್ನು ಮೃತ ಹನುಮಂತಪ್ಪನ ಕಡೆಯಿಂದ ಪಡೆದಿದ್ದು ಆದ್ದರಿಂದ ನನಗೆ ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಸಂಬಂಧ ಇಲ್ಲ ಎಂದರೆ ಸರಿ ಅಲ್ಲ.

8. ಈಗಾಗಲೇ ಪ್ರತಿವಾದಿಯರ ಮಧ್ಯ ಮೃತ ಹನುಮಂತಪ್ಪನೇ ಪಾಲು ವಿಭಾಗ ಮಾಡಿದ ಕೊಟ್ಟಿದ್ದರಿಂದ ನನಗೆ ಯಾವುದೇ ಹಿಸ್ಸೆ ಇಲ್ಲ ಎಂದರೆ ಸರಿ ಅಲ್ಲ. ನಾನು ಆ ಪಾಲು ವಿಭಾಗಕ್ಕೆ ಪಕ್ಷಗಾರರು ಅಲ್ಲ ಎಂದು ಹೇಳುತ್ತಾರೆ. ಸದ್ರಿ ದಾವೆಯಲ್ಲಿ ನಾನು ಕೇಳಿದ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.**